ಕಾರ್ಮಿಕರ ರಾಜ್ಯ ವಿಮಾ ನಿಗಮ
ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಭಾರತ ಸರ್ಕಾರ
कर्मचारी राज्य बीमा निगम
श्रम और रोजगार मंत्रालय, भारत सरकार
EMPLOYEES' STATE INSURANCE CORPORATION
Ministry Of Labour & Employment, Govt. of India
क.रा.बी. नि
E.S.I.C

ಪ್ರಾದೇಶಿಕ ಕಾರ್ಯಾಲಯ, ಕರ್ನಾಟಕ, ನಂ.10, ಬಿನ್ನಿ ಫೀಲ್ಡ್ಸ್, ಬಿನ್ನಿಪೇಟೆ, ಬೆಂಗಳೂರು- 560 023.
क्षेत्रीय कार्यालय, कर्नाटक, नं. 10 बिन्नीफील्ड्स, बिन्नीपेट, बेंगलूरु - 560 023.
REGIONAL OFFICE, KARNATAKA, NO. 10 BINNYFIELDS,
BINNYPET, BENGALURU –560 023,
Phone – 080-26742485, E-Mail – rd-karnataka@esic.nic.in, esicbng@nic.in
Website. www.esic.gov.in

# ಪದೇ ಪದೇ ಕೇಳಲಾಗುವ ಪ್ರಶ್ನೆಗಳು – SPREE 2025

## (ಉದ್ಯೋಗದಾತರು ಮತ್ತು ಉದ್ಯೋಗಿಗಳ ನೋಂದಣಿಯನ್ನು ಉತ್ತೇಜಿಸುವ ಯೋಜನೆ – 2025)



### 1. SPREE 2025 ಎಂದರೆ ಏನು?

SPREE (ಉದ್ಯೋಗದಾತರು/ ಉದ್ಯೋಗಿಗಳ ನೋಂದಣಿಯನ್ನು ಉತ್ತೇಜಿಸುವ ಯೋಜನೆ) ಎಂಬುದು ಕಾರ್ಮಿಕರ ರಾಜ್ಯ ವಿಮಾ ನಿಗಮದ ಒಂದು ವಿಶೇಷ ಉಪಕ್ರಮವಾಗಿದೆ, ಇದು ದಿನಾಂಕ 1ನೇ ಜುಲೈ ರಿಂದ 31ನೇ ಡಿಸೆಂಬರ್ 2025 ರವರೆಗೆ ಉದ್ಯೋಗದಾತರು ತಮ್ಮ ಕಾರ್ಖಾನೆ/ಘಟಕಗಳು ಮತ್ತು ಎಲ್ಲ ಅರ್ಹ ಕಾರ್ಮಿಕರನ್ನು ಹಿಂದಿನ ಅವಧಿಯ ಯಾವುದೇ ಬಾಕಿ ಬೇಡಿಕೆ ಇಲ್ಲದೆ ನೋಂದಾವಣೆ ಮಾಡಿಕೊಳ್ಳುವ ಒಂದು ಬಾರಿಯ ಅವಕಾಶವಾಗಿದೆ.

### 2. ಈ ಯೋಜನೆಯ ಪ್ರಯೋಜನವನ್ನು ಯಾರು ಪಡೆಯಬಹುದು?

❖ ಇಎಸ್‌ಐ ಕಾಯ್ದೆ ಅನುಷ್ಟಾನಗೊಂಡ ಪ್ರದೇಶದಲ್ಲಿದ್ದು, ಕಾಯ್ದೆಯಡಿಯಲ್ಲಿ ನೋಂದಾವಣೆಯಾಗುವ ಅರ್ಹತೆಯಿದ್ದು, ಇನ್ನೂ ನೋಂದಾವಣೆಯಾಗದ 10 ಮತ್ತು ಅದಕ್ಕಿಂತ ಹೆಚ್ಚಿನ ಕಾರ್ಮಿಕರನ್ನು ಹೊಂದಿರುವ ಉದ್ಯೋಗದಾತರು ತಮ್ಮ ಕಾರ್ಖಾನೆ ಮತ್ತು ಘಟಕಗಳನ್ನು (ಅಂಗಡಿಗಳು, ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು, ಸಿನೆಮಾ ಹಾಲ್, ರಸ್ತೆ ಸಾರಿಗೆ ಘಟಕಗಳು, ವಾರ್ತಾಪತ್ರಿಕಾ ಘಟಕಗಳು, ಖಾಸಗಿ ವೈದ್ಯಕೀಯ ಸಂಸ್ಥೆಗಳು, ವಿದ್ಯಾ ಸಂಸ್ಥೆಗಳು ಮತ್ತು ಮುನ್ಸಿಪಲ್ ಕಾರ್ಪೊರೇಷನ್ ಗಳಲ್ಲಿ ಕಾರ್ಯನಿರ್ವಹಿಸುವ ಗುತ್ತಿಗೆ ಕಾರ್ಮಿಕರು) ನೋಂದಾಯಿಸುವ ಅವಕಾಶ.

❖ ತಾತ್ಕಾಲಿಕ, ಸಾಂಧರ್ಭಿಕ ಗುತ್ತಿಗೆ ಕಾರ್ಮಿಕರನ್ನು ಒಳಗೊಂಡಂತೆ ತಮ್ಮಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಕಾರ್ಮಿಕರನ್ನು ನೋಂದಾವಣೆ ಮಾಡದಿರುವ ಉದ್ಯೋಗದಾತರು.

### 3. SPREE 2025 ಅಡಿಯಲ್ಲಿ ಉದ್ಯೋಗದಾತರು ಏಕೆ ನೋಂದಾಯಿಸಿಕೊಳ್ಳಬೇಕು?

❖ ಈ ಯೋಜನೆಯಡಿಯಲ್ಲಿ ನೋಂದಾವಣೆಯಾದ ಉದ್ಯೋಗದಾತರು ಘೋಷಿಸಿಕೊಂಡ ದಿನಾಂಕದ ಹಿಂದಿನ ಅವಧಿಯ ಯಾವುದೇ ದಾಖಲೆಗಳ ಪರಿಶೀಲನೆ ಅಥವಾ ಬಾಕಿ ಪಾವತಿಯ ಬೇಡಿಕೆ ಇರುವುದಿಲ್ಲ.

❖ ಹಿಂದಿನ ಅವಧಿಯ ಯಾವುದೇ ವಂತಿಕೆ ಪಾವತಿಯ ಭಾಧ್ಯತೆ ಇರುವುದಿಲ್ಲ.

❖ ಹಿಂದಿನ ಅವಧಿಯಲ್ಲಿ ನೋಂದಾವಣೆಯಾಗದ ಕಾರಣಕ್ಕೆ ಯಾವುದೇ ಕ್ರಮದಿಂದ ವಿನಾಯಿತಿ.

### 4. ಕಾರ್ಮಿಕರಿಗೆ ಸಿಗುವ ಪ್ರಮುಖ ಪ್ರಯೋಜನವೇನು?

ಒಮ್ಮೆ ನೋಂದಾಯಿಸಲ್ಪಟ್ಟಲ್ಲಿ, ಕಾರ್ಮಿಕರು (ವಿಮಾದಾರರು) ನೋಂದಣಿಯಾದ ದಿನಾಂಕದಿಂದ ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಲು ಅರ್ಹರಾಗುತ್ತಾರೆ

❖ ತಮಗೆ ಮತ್ತು ಕುಟುಂಬದ ಸದಸ್ಯರುಗಳಿಗೆ ವೈದ್ಯಕೀಯ ಆರೈಕೆ.

❖ ಅನಾರೋಗ್ಯ, ಪ್ರಸವ (ಹೆರಿಗೆ), ಅಪಘಾತ ಅಥವಾ ಉದ್ಯೋಗಕ್ಕೆ ಸಂಬಂಧಿಸಿದ ಮರಣದ ಸಂಧರ್ಭಗಳಲ್ಲಿ ನಗದು ಸೌಲಭ್ಯಗಳು

❖ ಇಎಸ್‌ಐ ಕಾಯ್ದೆ 1948 ರ ಅಡಿಯಲ್ಲಿ ಧೀರ್ಘಾವಧಿ ಭದ್ರತೆಯ ರಕ್ಷಣೆ.

### ೫. SPREE 2025 ಅಡಿಯಲ್ಲಿ ನೋಂದಾವಣಿ ಪ್ರಕ್ರಿಯೆ ಹೇಗೆ?

ಉದ್ಯೋಗದಾತರು ತಮ್ಮ ಘಟಕಗಳನ್ನು ಈ ಮೂಲಕ ನೋಂದಾಯಿಸಿಕೊಳ್ಳಬಹುದು

- ESIC ಪೋರ್ಟಲ್ : https://www.esic.gov.in
- ESIC ಪೋರ್ಟಲ್ ಮೂಲಕ ನೋಂದಾವಣಿ ಕುರಿತು ಸಹಾಯಕ್ಕಾಗಿ https://portal.esic.gov.in/ESICinsurance1/ESlClnsurancePortal/Employer_Employee registration through portal.pdf
- ಶ್ರಮ್ ಸುವಿಧಾ ಪೋರ್ಟಲ್ ನಿಂದ ನೋಂದಾವಣೆಯಾಗಲು ಈ ಕೆಳಗಿನ ಲಿಂಕ್‌ಗೆ ಭೇಟಿ ನೀಡಿ https://registration.shramsuvidha.gov.in/user/register
- MCA portal

### 6. SPREE 2025 ಅಡಿಯಲ್ಲಿ ವ್ಯಾಪ್ತಿಯ ದಿನಾಂಕ ಯಾವುದು?

- ಈ ಯೋಜನೆಯಡಿಯಲ್ಲಿ ಉದ್ಯೋಗದಾತರು ನೋಂದಾವಣೆಗೊಂಡ ದಿನದಿಂದ ವ್ಯಾಪ್ತಿಯನ್ನು ಪರಿಗಣಿಸಲಾಗುತ್ತದೆ ಮತ್ತು ಆ ದಿನದಿಂದಲೇ ವ್ಯಾಪ್ತಿಯು ಆರಂಭವಾಗುತ್ತದೆ.
- ಉದ್ಯೋಗದಾತ ನೋಂದಾಯಿಸಿ ಘೋಷಿಸಿದ ದಿನದಿಂದಲೇ ಕಾರ್ಮಿಕರ ವ್ಯಾಪ್ತಿಯನ್ನು ಪರಿಗಣಿಸಲಾಗುತ್ತದೆ.
- ಈ ಯೋಜನೆಯಡಿಯಲ್ಲಿ ನೋಂದಾವಣೆಗೊಂಡಲ್ಲಿ ನೋಂದಾವಣೆಗೆ ಮೊದಲು ಯಾವುದೇ ಹಿಂದಿನ ವಂತಿಕೆಗಳನ್ನು ಪಡೆಯಲಾಗುವುದಿಲ್ಲ ಮತ್ತು ಹಿಂದಿನ ಅವಧಿಗೆ ಸೌಲಭ್ಯಗಳು ಅನ್ವಯಿಸುವುದಿಲ್ಲ.

### 7. ಯಾವುದೇ ರೀತಿಯ ನಿರೀಕ್ಷಣೆ ಅಥವಾ ದಂಡ ಅನ್ವಯವಾಗುತ್ತದೆಯೇ?

ಇಲ್ಲ – SPREE 2025 ಅಡಿಯಲ್ಲಿ

- ವ್ಯಾಪ್ತಿ ದಿನಾಂಕದ ಹಿಂದಿನ ಅವಧಿಗೆ ಯಾವುದೇ ರೀತಿಯ ನಿರೀಕ್ಷಣೆಯನ್ನು ನಡೆಸಲಾಗುವುದಿಲ್ಲ.
- ವ್ಯಾಪ್ತಿ ದಿನಾಂಕದ ಹಿಂದಿನ ಅವಧಿಗೆ ಯಾವುದೇ ರೀತಿಯ ಬಾಕಿ ವಂತಿಕೆ ಪಾವತಿ ಬೇಡಿಕೆ ಇರುವುದಿಲ್ಲ.
- ಇದು ಸ್ವಯಂಪ್ರೇರಿತ ಮತ್ತು ಸಂಘರ್ಷಮುಕ್ತವಾಗಿದೆ.

### ೮. SPREE 2025 ರಾಷ್ಟ್ರೀಯ ಉದ್ದೇಶಗಳನ್ನು ಹೇಗೆ ಬೆಂಬಲಿಸುತ್ತದೆ?

ಈ ಯೋಜನೆಯು ಕೆಳಕಂಡಂತೆ ಉತ್ತೇಜಿಸುತ್ತದೆ

- ಸಾರ್ವತ್ರಿಕ ಸಾಮಾಜಿಕ ಭದ್ರತೆಯ ವ್ಯಾಪ್ತಿ
- ಕಾರ್ಖಾನೆ ಮತ್ತು ಘಟಕಗಳನ್ನು ಕಾರ್ಯನಿರ್ವಹಿಸುವ ಸಾಂಧರ್ಭಿಕ, ತಾತ್ಕಾಲಿಕ ಕಾರ್ಮಿಕರನ್ನು ಒಳಗೊಂಡಂತೆ ಎಲ್ಲಾ ಕಾರ್ಮಿಕರನ್ನು ವ್ಯಾಪ್ತಿಗೊಳಪಡಿಸುವ ಪ್ರಕ್ರಿಯೆಯ ವಿಸ್ತರಿಸುವಿಕೆ (ಅಂಗಡಿಗಳು, ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು, ಸಿನೆಮಾ ಹಾಲ್, ರಸ್ತೆ ಸಾರಿಗೆ ಘಟಕಗಳು, ವಾರ್ತಾಪತ್ರಿಕಾ ಘಟಕಗಳು, ಖಾಸಗಿ ವೈದ್ಯಕೀಯ ಸಂಸ್ಥೆಗಳು, ವಿದ್ಯಾ ಸಂಸ್ಥೆಗಳು ಮತ್ತು ಮುನ್ಸಿಪಲ್ ಕಾರ್ಪೊರೇಷನ್‌ಗಳಲ್ಲಿ ಕಾರ್ಯನಿರ್ವಹಿಸುವ ಗುತ್ತಿಗೆ ಕಾರ್ಮಿಕರು)
- ಸರಳೀಕೃತ ವ್ಯವಹಾರದ ಗುರಿಯನ್ನು ಬೆಂಬಲಿಸುತ್ತದೆ.

**<u>ಸಹಾಯ ಬೇಕೆ?</u>**

ಸಹಾಯ ಅಥವಾ ಸಮಸ್ಯೆಗಳ ಪರಿಹಾರಕ್ಕಾಗಿ ಭೇಟಿ ನೀಡಿ : https://esic.gov.in ಅಥವಾ ನಿಮ್ಮ ಹತ್ತಿರದ ಇ.ಎಸ್.ಐ.ಸಿ ಶಾಖಾ ಕಛೇರಿ/ ಪ್ರಾದೇಶಿಕ ಕಛೇರಿಯನ್ನು ಸಂಪರ್ಕಿಸಿ.